**<u>ದಿನಾಂಕಃ 21.06.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಮುಂದುವರೆದ ಪಾಟೀ ಸವಾಲು ಃ ಪ್ರತಿವಾದಿಗಳ ಪರ ಶ್ರೀ ಹೆಚ್.ಕೆ. ವಕೀಲರಿಂದಃ</u>**

1) ನಾನು ಭೂಹಳ್ಳಿ ಗ್ರಾಮದಲ್ಲಿ ಜಮೀನನ್ನು ಖರೀದಿ ಮಾಡಿರುತ್ತೇನೆ. ಸಹಜವಾಗಿ ಯಾವುದೇ ವ್ಯಕ್ತಿ ಒಂದು ಜಮೀನನ್ನು ಖರೀದಿ ಮಾಡುವಾಗ ದಾಖಲೆಗಳನ್ನು ನೋಡಿ ಖರೀದಿ ಮಾಡುತ್ತಾರೆ ಎಂದರೆ ಸರಿ. ನನ್ನ ತಂದೆ ಸಹಾ ಜಮೀನಿನ ಸಂಬಂಧ ದಾಖಲೆಗಳನ್ನು ಪರಿಶೀಲನೆ ಮಾಡಿ ನಂತರ ಖರೀದಿ ಮಾಡಿರುತ್ತಾರೆ. ನನ್ನ ತಂದೆ ಮತ್ತು ಪ್ರತಿವಾದಿಗಳ ತಂದೆ ಇಬ್ಬರು ಭೂಹಳ್ಳಿ ಗ್ರಾಮದವರು. ದಾವಾ ಸ್ವತ್ತು ಸಹಾ ಭೂಹಳ್ಳಿ ಗ್ರಾಮದಲ್ಲಿ ಇರುತ್ತದೆ. ಭೂಹಳ್ಳಿ ಗ್ರಾಮದಲ್ಲಿ ಸರ್ವೆ ನಂ.26 ಮತ್ತು 30/4 ರ ಜಮೀನುಗಳು ಇವೆ ಎಂದರೆ ಸರಿ. ನನ್ನ ತಂದೆ ತಾನು ಖರೀದಿಸಿದ ಜಮೀನಿನ ಸಂಬಂಧ ಮೊದಲೇ ಜಮೀನನ್ನು ನೋಡಿ ನಂತರ ದಾಖಲೆಗಳನ್ನು ಪರಿಶೀಲಿಸಿ ಖರೀದಿ ಮಾಡಿರುತ್ತಾರೆ ಎಂದರೆ ಸರಿ. ನಿಮ್ಮ ತಂದೆ ಸರ್ವೆ ನಂ.26 ರಲ್ಲಿನ ಜಮೀನನ್ನು ಖರೀದಿ ಮಾಡಿರುತ್ತಾರೆ ಎಂದರೆ ಸಾಕ್ಷಿಯು ತನ್ನ ತಂದೆ ಸರ್ವೆ ನಂ.30/4 ರಲ್ಲಿ ಜಮೀನನ್ನು ಖರೀದಿ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ನಾವು ಪ್ರಸ್ತುತ ಸರ್ವೆ ನಂ.26 ರ ಜಮೀನಿನಲ್ಲಿ ಸ್ವಾಧೀನ ಹೊಂದಿದ್ದು ಪ್ರತಿವಾದಿಗಳು ಸರ್ವೆ ನಂ.30/4 ರ ಜಮೀನಿನಲ್ಲಿ ಸ್ವಾಧೀನ ಹೊಂದಿರುತ್ತಾರೆ ಎಂದರೆ ಸರಿಯಲ್ಲ.

2) ನಿಪಿ.3 ರ ಕ್ರಯ ಪತ್ರದ ಸಂಗತಿಗಳನ್ನು ತಿಳಿದುಕೊಂಡಿರುತ್ತೇನೆ. ಸದರಿ ಕ್ರಯಪತ್ರದಲ್ಲಿ ಸಾಕ್ಷಿದಾರರಾಗಿ ಯಾರು ಯಾರು ಸಹಿ ಮಾಡಿದ್ದಾರೆ ಎಂದು ನನಗೆ ನೆನಪಿಲ್ಲ. ಸದರಿ ಪತ್ರಕ್ಕೆ ಸಾಕ್ಷಿದಾರರಾಗಿ ಸಹಿ ಮಾಡಿರುವ ವ್ಯಕ್ತಿಗಳು ಜೀವಂತ ಇರುತ್ತಾರೆಯೇ ಎಂದರೆ ಸಾಕ್ಷಿಯು ಆ ಬಗ್ಗೆ ತನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸರ್ವೆ ನಂ.30/4 ರ ಪಹಣಿ ಪತ್ರಿಕೆಯು ಪ್ರತಿವಾದಿಗಳ ಹೆಸರಿನಲ್ಲಿ ಇದೆ. ಪ್ರತಿವಾದಿಗಳ ತಂದೆ ಮೃತ ಪಟ್ಟ ನಂತರ ಪೌತಿ ಆಧಾರದ ಮೇಲೆ ಅವರ ಹೆಸರಿಗೆ ಸರ್ವೆ ನಂ.30/4 ರ ಪಹಣಿ ಪತ್ರಿಕೆ ದಾಖಲಾಗಿದೆ ಎಂದರೆ ಸರಿಯಲ್ಲ. ಆ ರೀತಿ ದಾವಾಸ್ವತ್ತಿನ ಪಹಣಿ ಪತ್ರಿಕೆ ಪ್ರತಿವಾದಿಗಳ ಹೆಸರಿನಲ್ಲಿ ಇರುವುದನ್ನು ಪ್ರಶ್ನೆ ಮಾಡಿ ಕಂದಾಯ ನ್ಯಾಯಾಲಯಕ್ಕೆ ಅರ್ಜಿಯನ್ನು ಸಲ್ಲಿಸಿರುವುದಿಲ್ಲ. ಜಮೀನಿನಲ್ಲಿ ಇರುವ ಟಿಸಿ ಗೆ ಸಂಬಂಧಿಸಿದಂತೆ ಎಲೆಕ್ಟ್ರಿಕ್ ಬಿಲ್ಲು ಮಹದೇವಯ್ಯ ಮತ್ತು ವೀರಯ್ಯ ರವರ ಹೆಸರಿನಲ್ಲಿ ಬರುತ್ತಿದೆ. ನಿಪಿ.11 ರ ದಾಖಲೆಯನ್ನು ಪ್ರಕರಣಕ್ಕೆ ಅನುಕೂಲ ಆಗಲೀ ಎಂಬ ಕಾರಣಕ್ಕೆ ಸೃಷ್ಟಿ ಮಾಡಿ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ಸದರಿ ದಾಖಲೆಯ ಮೇಲೆ ಹೊಸದಾಗಿ ಇತ್ತೀಚೆಗೆ ಬರವಣಿಗೆ

ಮಾಡಲಾಗಿದೆ ಎಂದರೆ ಸರಿಯಲ್ಲ. ನಿಪಿ.11 ರ ದಾಖಲೆಗೆ ಸಹಿ ಮಾಡಿರುವ ಮಂಜು ಎಂಬ ವ್ಯಕ್ತಿಯನ್ನು ಕರೆದು ಸಾಕ್ಷಿ ವಿಚಾರಣೆ ಮಾಡಿಸಲು ಆಗುವುದಿಲ್ಲ.

3) 1, 2, 4 ಮತ್ತು 5ನೇ ವಾದಿಗಳು ಆರೋಗ್ಯವಾಗಿ ಇರುತ್ತಾರೆಯೇ ಎಂದರೆ ಸಾಕ್ಷಿಯು ಅವರು ತೋಟದಲ್ಲಿ ಕೆಲಸ ಮಾಡುವುದಾಗಿ ನುಡಿಯುತ್ತಾರೆ. ಸದರಿಯವರು ಸಾಕ್ಷ್ಯ ನುಡಿಯಲು ನ್ಯಾಯಾಲಯಕ್ಕೆ ಬರುವುದಿಲ್ಲ ಮತ್ತು ಅವರು ನನಗೆ ಅಧಿಕಾರ ಪತ್ರವನ್ನು ನೀಡಿರುತ್ತಾರೆ. ಸರ್ವೆ ನಂ.26 ರ ಜಮೀನಿನ ಪಹಣಿ ಪತ್ರಿಕೆಯು ಪ್ರತಿವಾದಿಗಳ ಹೆಸರಿನಲ್ಲಿ ಬರುತ್ತಿದ್ದು ಸರ್ವೆ ನಂ.30/4 ರ ಜಮೀನಿನ ಪಹಣಿ ಪತ್ರಿಕೆ ನನ್ನ ಹೆಸರಿನಲ್ಲಿ ದಾಖಲಾಗಿರುತ್ತದೆ. ಸರ್ವೆ ನಂ.26 ರ ಜಮೀನಿನ ಪಹಣಿ ಪತ್ರಿಕೆಯು ನಿಮ್ಮ ಹೆಸರಿನಲ್ಲಿ ದಾಖಲಾಗಿದೆ ಎಂದರೆ ಸರಿಯಲ್ಲ. ನನ್ನ ತಂದೆ ಸರ್ವೆ ನಂ.26 ರಲ್ಲಿನ ಜಮೀನಿನನ್ನು ಖರೀದಿ ಮಾಡಿರುತ್ತಾರೆಯೇ ಹೊರತು ವಾದ ಪತ್ರದಲ್ಲಿ ಹೇಳಿದಂತೆ ಸರ್ವೆ ನಂ.30/4 ರಲ್ಲಿನ ಜಮೀನನ್ನು ಖರೀದಿ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಸರ್ವೆ ನಂ.30/4 ರಲ್ಲಿನ ಜಮೀನು ಹೆಚ್ಚಿಗೆ ಬೆಲೆ ಬಾಳುವ ಕಾರಣ ಅದನ್ನು ಹೊಡೆದುಕೊಳ್ಳುವ ಸಲುವಾಗಿ ಸುಳ್ಳು ಪ್ರಕರಣ ದಾಖಲಿಸಿ, ಸುಳ್ಳು ಸಾಕ್ಷ್ಯ ಪ್ರಮಾಣ ಪತ್ರವನ್ನು ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ : ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕೀಕರಣ ಮಾಡಲಾಯಿತು).

ಓ. ಹೆ. ಕೇ. ಸರಿ ಇದೆ.

**ಪ್ರಧಾನ ದಿವಾಣಿ ಹಾಗೂ ಪ್ರ.ದ.ನ್ಯಾ. ದಂ.ಗಳ**
**ನ್ಯಾಯಾಲಯ, ಚನ್ನಪಟ್ಟಣ.**